**ಸಾಕ್ಷಿಯನ್ನು ದಿಃ *05/07/2024* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
***ಮುಂದುವರೆದ ಪಾಟೀ ಸವಾಲು ಃ ವಾದಿ ಪರ ವಕೀಲರಿಂದ.***

ನನ್ನ ಮಾವ ತೀರಿಹೋದ ಮೇಲೆ ಬಂದಿರುವ ಸೇವಾಸೌಲಭ್ಯಗಳು ವಾದಿ ಮತ್ತು ಪ್ರತಿವಾದಿ ನಂ.2 ಮತ್ತು 3 ಮತ್ತು ನನ್ನ ಪತಿ ಎಲ್ಲರೂ ಸಹ ಅವುಗಳನ್ನು ಹಂಚಿಕೊಂಡಿದ್ದರು ಎಂದು ನನ್ನ ಪ್ರತಿವಾದ ಪತ್ರದಲ್ಲಿ ಬರೆದಿರುವ ಹಾಗೇ ಎಷ್ಟು ಮೊತ್ತದ ಸೇವಾಸೌಲಭ್ಯ ಪಡೆದಿದ್ದರು ಎಂದು ನನಗೆ ಗೊತ್ತಿಲ್ಲ ಎಂದು ಸಾಕ್ಷಿದಾರರು ಹೇಳುತ್ತಾರೆ. ನನ್ನ ಅತ್ತೆಯ ಬಂಗಾರ ಅವರ ಹೆಣ್ಣುಮಕ್ಕಳಿಗೆ ಕೊಟ್ಟಿರುತ್ತಾರೆ. ಸದರಿ ಹಂಚಿಕೆ ನನ್ನ ಮಾವ ತೀರಿಕೊಂಡ ಆರು ತಿಂಗಳಲ್ಲಿ ಆಗಿರುತ್ತದೆ. ಆ ಸಮಯದಲ್ಲಿ ನಮ್ಮ ಮನೆತನದ ಆಸ್ತಿಯ ಕುರಿತು ಪಾಲು ಆಗಿದೆ ಇಲ್ಲವೊ ನನಗೆ ಗೊತ್ತಿಲ್ಲ.

ನನ್ನ ಮದುವೆಯಾದ ಮೇಲೆ ನಾನು, ನನ್ನ ಅತ್ತೆ, ಗಂಡ ಮತ್ತು ಮೈದುನ ಜೊತೆ ವಾಸವಿದ್ದೇವು. ಒಂದು ವರ್ಷದ ನಂತರ ನನ್ನ ಪತಿಗೆ ಹುಬ್ಬಳ್ಳಿಯ ನವನಗರಕೆಕ ವರ್ಗಾವಣೆಯಾಗಿದ್ದರಿಂದ ನಾವು ಅಲ್ಲಿ ವಾಸವಿದ್ದೇವು. ಈ ರೀತಿ ಐದು ವರ್ಷಗಳ ಕಾಲ ಅಲ್ಲಿಯೇ ಇದ್ದೇವು. ನಂತರ 2003 ನೇ ಇಸ್ವಿಯಲ್ಲಿ ನನ್ನ ಪತಿ ಒಂದು ಮನೆಯನ್ನು ಧಾರವಾಡದಲ್ಲಿ ಖರೀದಿ ಮಾಡಿರುವ ಕಾರಣ ನಾವು ಧಾರವಾಡದಲ್ಲಿ ವಾಸ ಮಾಡುತ್ತಿದ್ದೇವು. ಸದರಿ ಮನೆ ಖರೀದಿ ಮಾಡುವ ಪೂರ್ವದಲ್ಲಿ ನನ್ನ ಅತ್ತೆ ಮತ್ತು ಮೈದುನ ಬಾಡಿಗೆ ಮನೆಯಲ್ಲಿ ವಾಸವಿದ್ದರು. ಸದರಿ ಮನೆ ನನ್ನ ಗಂಡನ ಮನೆತನದ ಮನೆ ಇದ್ದು, ಸದರಿ ಮನೆ ಒತ್ತಿ ಹಾಕಿದ್ದು ಇದ್ದು, ಅದನ್ನು ಬಿಡಿಸಿಕೊಂಡು ನನ್ನ ಪತಿಯೇ ಖರೀದಿ ಮಾಡಿರುತ್ತಾರೆ ಎಂದರೆ ನಿಜ. ಸದರಿ ಖರೀದಿ ಎಲ್ಲ ಕುಟುಂಬ ಸದಸ್ಯರು ಕೂಡಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ನನ್ನ ನಾದಿನಿಯ ಮಗಳು ಪ್ರಿಯಂಕಾ ಮತ್ತು ಮಗ ರಾಹುಲ ಇವರು 11 ವರ್ಷಗಳ ಕಾಲ ನಮ್ಮ ಜೊತೆಗೆ ಧಾರವಾಡದಲ್ಲಿ ವಾಸವಿರುತ್ತಿದ್ದರು ಎಂದರೆ ಸಾಕ್ಷಿದಾರರು ನಮ್ಮ ಅತ್ತೆಯ ಜೊತೆಗೆ ಬಾಡಿಗೆಮನೆಯಲ್ಲಿ ವಾಸವಿರುತ್ತಿದ್ದರು ಎಂದು ಉತ್ತರಿಸುತ್ತಾರೆ. ಈ ರೀತಿ ನನ್ನ ಅತ್ತೆ, ನನ್ನ ನಾದಿನಿಯ ಎರಡು ಮಕ್ಕಳು, ಮೈದುನ, ನನ್ನ ಗಂಡ ಮತ್ತು ನಾನು ಎಲ್ಲರೂ ಒಂದೇ ಮನೆಯಲ್ಲಿ ವಾಸ ಮಾಡುತ್ತಿದ್ದೇವು ಎಂದರೆ ಸರಿಯಲ್ಲ. ನನ್ನ ಮೈದುನ ಚಿಕ್ಕವನು ಇರುವ ಕಾರಣ ನನ್ನ ಪತಿ ಹಿರಿಯ ಮಗ ಇರುವ ಕಾರಣ ನನ್ನ ಪತಿಯ ಹೆಸರಿನಲ್ಲಿ ನಮ್ಮ ಮನೆತನದವರು ಸದರಿ ಮನೆ ಖರೀದಿ ಮಾಡಿರುತ್ತಾರೆ

ಎಂದರೆ ಸಾಕ್ಷಿದಾರರು ನನ್ನ ಪತಿ ಸಾಲ ಮಾಡಿ ಮನೆಯನ್ನು ಖರೀದಿ ಮಾಡಿರುತ್ತಾರೆ ಎಂದು ಉತ್ತರಿಸುತ್ತಾರೆ. ಈ ರೀತಿ ಹೇಳಿಕೆಯನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಮನೆ ಅಂದಾಜು ಐದುವರೆ ಲಕ್ಷ ರೂಪಾಯಿಗಳಿಗೆ ಖರೀದಿ ಮಾಡಿರುತ್ತಾರೆ. ಅದಕ್ಕೆ ರಾಮಚಂದ್ರ ಕುರಾಡೆ ಇವರು ಯಾವುದೇ ರೀತಿಯ ಹಣ ಕೊಟ್ಟಿರುವುದಿಲ್ಲ. ನನ್ನ ಪತಿ ಅಂತ್ಯಕ್ರಿಯೆ ಮುಗಳಖೋಡನಲ್ಲಿ ಆಗಿರುತ್ತದೆ. ನಂತರ ನಾನು ಅಲ್ಲಿ 15 ದಿವಸ ವಾಸವಿದ್ದು ನಂತರ ಧಾರವಾಡಕ್ಕೆ ಬಂದಿರುತ್ತೇನೆ. ನನ್ನ ಮೈದುನ ನೇಮಿನಾತ 2011 ನೇ ಇಸ್ವಿಯಲ್ಲಿ ತೀರಿಕೊಂಡಿರುತ್ತಾರೆ. ಸದರಿಯವರು ತೀರಿಹೋಗುವವರು ನಾವು ಎಲ್ಲರೂ ಒಟ್ಟಿಗೆ ವಾಸವಿದ್ದೇವು ಎಂದರೆ ಸರಿಯಲ್ಲ. ನನ್ನ ಪತಿಯೂ ತೀರಿಹೋಗುವವರೆಗೂ ನಾವು ಒಟ್ಟಿಗೆ ವಾಸವಿರುತ್ತಿದ್ದೇವು ಎಂದರೆ ಸರಿಯಲ್ಲ. ನನ್ನ ಅತ್ತೆ ಅವರ ಮಗಳು ಮತ್ತು ಅಳಿಯ ಜೊತೆಗೆ ಮುಗಳಖೋಡದಲ್ಲಿ ವಾಸವಿರುತ್ತಿದ್ದರು, ಮೂರು ತಿಂಗಳಿಗೊಮ್ಮೆ ಬಂದು ಪಿಂಚಣಿ ಪಡೆದಕೊಂಡು ಆಸ್ಪತ್ರೆಯಲ್ಲಿ ತೋರಿಸಿಕೊಂಡು ಮತ್ತೇ ಮರಳಿ ಹೋಗುತ್ತಿದ್ದರು. ಈ ರೀತಿ ನನ್ನ ಮೈದುನ ತೀರಿಹೋದಾಗಿನಿಂದ ನನ್ನ ಪತಿ ತೀರಿಹೋಗುವವರೆಗೆ ಬಂದು ಹೋಗಿ ಮಾಡುತ್ತಿದ್ದರು. ನನ್ನ ನಾದಿನಿ ಮಕ್ಕಳು 2011 ನೇ ಇಸ್ವಿಯವರೆಗೆ ಅಂದರೆ ನನ್ನ ಮೈದುನ ತೀರಿಹೋಗುವವರೆಗೆ ಧಾರವಾಡದಲ್ಲಿ ವಾಸವಿದ್ದರು. ಈಗಲೂ ಸಹ ಪ್ರಿಯಂಕಾ ಧಾರವಾಡದಲ್ಲಿದ್ದರು ಸಹ ಅವರ ತಂದೆ ತಾಯಿ ಹತ್ತಿರ ಮುಗಳಖೋಡದಲ್ಲಿ ವಾಸವಿರುತ್ತಾಳೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡನ ತೀರಿಹೋದ ನಂತರ ನಮ್ಮ ಅತ್ತೆಯನ್ನು ನಾನು ನೋಡಿಕೊಳ್ಳದೆ ಬೆಳಗಾವಿಗೆ ಹೋಗಿ ವಾಸವಿದ್ದೆ, ಆದ್ದರಿಂದ ಇಲ್ಲಿಯವರೆಗೆ ಸದರಿ ಪ್ರಿಯಂಕಾ ನನ್ನ ಅತ್ತೆಯನ್ನು ನೋಡಿಕೊಳ್ಳುತ್ತಿದ್ದಾಳೆ ಎಂದರೆ ಸರಿಯಲ್ಲ. ಈಗ ಮನೆಯಲ್ಲಿ ನನ್ನ ಅತ್ತೆ ಒಬ್ಬರೇ ಇರುತ್ತಾರೆ.

ಧಾರವಾಡದಲ್ಲಿರುವ ಮನೆ ಮತ್ತು ಸತ್ತೂರನಲ್ಲಿರುವ ನಿವೇಶನ ನಮ್ಮ ಕುಟುಂಬದ ಉತ್ಪನದಿಂದ ಖರೀದಿ ಮಾಡಿದ ಆಸ್ತಿಗಳು ಎಂದರೆ ಸುಳ್ಳು. ನನ್ನ ಚಿಕ್ಕಮ್ಮ ಅವರದೆ ಬಂಗಾರ ಅಡುವಿಟ್ಟು ಬ್ಯಾಂಕಿನಿಂದ ನಮ್ಮ ಮುಖಾಂತರ ಸಾಲ ಪಡೆದಿದ್ದರು. ನನ್ನ ತಂದೆ ತಮ್ಮ ಮನೆ ಕಟ್ಟುವ ಸಲುವಾಗಿ ಸದರಿ ಸಾಲ ಪಡೆದಿರುತ್ತಾರೆ ಎಂದರೆ ಸುಳ್ಳು. ಆದ್ದರಿಂದ ನನ್ನ ಪತಿ ತೀರಿಹೋದ ನಂತರ ಸದರಿ ಬಂಗಾರವನ್ನು ಬಿಡಿಸಿ

ನನ್ನ ಚಿಕ್ಕಮ್ಮನಿಗೆ ಕೊಟ್ಟಿರುತ್ತೇನೆ ಎಂದರೆ ಸಾಕ್ಷಿದಾರರು ನನ್ನ ಚಿಕ್ಕಮ್ಮ ಮಾಡಿದ ಸಾಲದ ಬಂಗಾರವನ್ನು ಬಿಡಿಸಿಕೊಟ್ಟಿರುತ್ತೇವೆ ಎಂದು ಹೇಳುತ್ತಾರೆ.

ನಮ್ಮ ಮನೆಯಲ್ಲಿ ಒಂದು ಕಾರು ಇದ್ದು, ಸದ್ಯಕ್ಕೆ ಅದು ನನ್ನ ಹತ್ತಿರವಿರುತ್ತದೆ. ಅದನ್ನು ನಾನೇ ಉಪಯೋಗಿಸುತ್ತಿದ್ದೇನೆ. ಬೆಳಗಾವಿಯಲ್ಲಿ ಒಂದು ಅಪಘಾತವಾಗಿರುತ್ತದೆ ಎಂದರೆ ನಿಜ. ಸದರಿ ಅಪಘಾತದಿಂದ ನನ್ನ ಪತಿಗೆ ಮಾನಸಿಕ ತೊಂದರೆಯಾಗಿ ಅವರಿಗೆ ಸಾವಾಗಿರುತ್ತದೆ ಎಂದರೆ ಸರಿಯಲ್ಲ. ನನ್ನ ಪ್ರತಿವಾದ ಪತ್ರದಲ್ಲಿ ವಾದಿಯು ಸದರಿ ಖರೀದಿಗಳಿಗೆ ತಮ್ಮ ಭಾಗದ ಹಣವನ್ನು ಕೊಟ್ಟಿಲ್ಲ ಎಂದು ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ನಮಗೆ ಇರುವ ಎಲ್ಲ ಆಸ್ತಿಗಳು ಕುಟುಂಬ ಮನೆತನದ ಹಣದಿಂದ ಖರೀದಿಸಿರುವ ಆಸ್ತಿಗಳು ಎಂದರೆ ಸರಿಯಲ್ಲ. ನಮ್ಮ ಕುಟುಂಬದಲ್ಲಿ ಪಾಲು ಆಗಿದೆ ಎಂದು ಹೇಳಿರುವ ಕುರಿತು ಯಾವುದೇ ದಾಖಲೆ ಇಲ್ಲ.

ನನ್ನ ಪ್ರತಿವಾದ ಪತ್ರದ 16 ನೇ ಖಂಡಿಕೆಯಲ್ಲಿ ಹೇಳಿದ ಹಾಗೇ ವಿಮೆ ಪಾಲಿಸಿಗಳಿಂದ ಬರುವ ಹಣದಲ್ಲಿ ನನಗೆ 75 ಪ್ರತಿಶತ ಮತ್ತು ನನ್ನ ಅತ್ತೆಗೆ 25 ಪ್ರತಿಶತ ಎಂದು ಬರೆದಿದ್ದು ನಿಜವಿರುತ್ತದೆ. ಈ ರೀತಿ ವಿಮೆ ಪಾಲಿಸಿಯಿಂದ ಬಂದ ಹಣ ನನ್ನ ಅತ್ತೆಗೆ ಕೊಟ್ಟಿರುವುದಿಲ್ಲ.

ಸಾಕ್ಷಿದಾರರಿಗೆ ಒಂದು ದಾಖಲೆ ತೋರಿಸಲಾಗಿ ಮೃತರ ಕುಟಂಬದ ಜೀವಂತ ಸದಸ್ಯರು ಎಂದು ಘೋಷಿಸಬೇಕೆಂದು ನಾನು ಮಾತ್ರ ಅರ್ಜಿ ನೀಡಿರುತ್ತೇನೆ ಎಂದರೆ ನಿಜ, ಆದರೆ ಮೊದಲು ಅವರು ಅರ್ಜಿ ನೀಡಿರುತ್ತಾರೆ ಎಂದು ಹೇಳುತ್ತಾರೆ. ಸದರಿ ದಾಖಲೆ ಸಾಕ್ಷಿದಾರರು ಒಪ್ಪಿಕೊಂಡಿದ್ದರಿಂದ ಅದನ್ನು ***ನಿ.ಪಿ.7*** ಎಂದು ಗುರುತಿಸಲಾಯಿತು. ಅದಕ್ಕೆ ಪೂರಕವಾಗಿ ನಾನು ಪ್ರತಿಜ್ಞಾಪತ್ರ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಅರ್ಜಿಗೆ ಪ್ರಮಾಣಪತ್ರ ಲಗತ್ತಿಸಿ ಕೊಟ್ಟಿರುತ್ತೇನೆ. ಸಾಕ್ಷಿದಾರರು ಸದರಿ ಪ್ರಮಾಣಪತ್ರ ಪುನಃ ನೋಡಿ ಇದೇ ಪ್ರಮಾಣಪತ್ರ ಇರಬಹುದು, ಸಹಿ ಮಾತ್ರ ನನ್ನದು ಅಲ್ಲ ಎಂದು ಹೇಳುತ್ತಾರೆ.

ನಮ್ಮ ಅತ್ತೆ ಮೃತರ ಕುಟುಂಬದ ಜೀವಂತ ಸದಸ್ಯರ ಪತ್ರಕ್ಕೆ ನೀಡುವ ಅರ್ಜಿಯಲ್ಲಿ ನನ್ನನು ಮತ್ತು ಅವರನ್ನು ಸೇರಿಸಿಕೊಟ್ಟಿದ್ದು ಎಂದು ಸದರಿ ಪ್ರತಿಯನ್ನು ಸಾಕ್ಷಿದಾರರಿಗೆ ತೋರಿಸಲಾಗಿ

ಸಾಕ್ಷಿದಾರರು ಅದನ್ನು ಒಪ್ಪಿರುವ ಕಾರಣ ಅದನ್ನು ***ನಿ.ಪಿ.8*** ಎಂದು ಗುರುತಿಸಲಾಯಿತು. ಈ ರೀತಿ ನನ್ನ ಅತ್ತೆ ಅರ್ಜಿ ನೀಡಿ ಜೀವಂತ ಸದಸ್ಯರ ಪ್ರಮಾಣಪತ್ರ ಪಡೆದಿದ್ದು ನನಗೆ ಗೊತ್ತಿಲ್ಲ. ಈ ವಿಷಯ ನನಗೆ ಗೊತ್ತಿದ್ದರೂ ಸಹ ಮತ್ತ ನನ್ನ ಅತ್ತೆ ವಾರಸುದಾರರು ಆಗುತ್ತಾರೆ ಎಂದು ಗೊತ್ತಿದ್ದು, ನಾನು ಒಬ್ಬಳೆ ವಾರಸುದಾರಳು ಎಂದು ಸುಳ್ಳು ಪ್ರಮಾಣಪತ್ರ ನೀಡಿರುತ್ತೇನೆ ಎಂದರೆ ಸರಿಯಲ್ಲ. ಈ ರೀತಿ ತಹಶೀಲದಾರರಿಂದ ನಾನು ಒಬ್ಬಳೆ ವಾರಸುದಾರಳು ಎಂದು ಪ್ರಮಾಣಪತ್ರ ಪಡೆದುಕೊಂಡು ನನ್ನ ಅತ್ತೆಯನ್ನು ಹೊರತುಪಡಿಸಿ ಸದರಿ ವಿಮೆ ನಾನು ಒಬ್ಬಳೆ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ನನ್ನ ಪತಿ ಪಡೆದುಕೊಂಡಿರುವ ಸಾಲವು ಇನ್ನೂ ತೀರಿಲ್ಲ ಎಂದು ಬರೆದಿದ್ದು ನಿಜವಿರುತ್ತದೆ, ಸಾಕ್ಷಿದಾರರು ನಾನೇ ತೀರಿಸುತ್ತಿದ್ದೇನೆ ಎಂದು ಉತ್ತರಿಸುತ್ತಾರೆ. ನನ್ನ ತಂದೆ ನಿವೃತ್ತಿಯಾಗಿರುವ ಕಾರಣ ಅವರಿಗೆ ಸಾಲ ಸಿಗುವುದಿಲ್ಲ ಎಂದು ನನ್ನ ಮನೆಯವರ ಹೆಸರಿನಲ್ಲಿ ಸಾಲ ಪಡೆದಿದ್ದು ಇರುತ್ತದೆ ಎಂದರೆ ಸರಿಯಲ್ಲ. ಆದ್ದರಿಂದ ಸಾಲವನ್ನು ನಾನೇ ತೀರಿಸುತ್ತಿದ್ದೇನೆ ಎಂದು ಹೇಳುವ ವಿಷಯ ಸಂಗತಿ ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ. ನನ್ನ ಪತಿ ಆಸ್ತಿಗಳನ್ನು ಖರೀದಿ ಮಾಡುವಾಗ ನನ್ನ ಅತ್ತೆಯ ಮೊಕ್ತಿಯಾರ ನಾಮೆದಾರ ರಾಮಚಂದ್ರ ಕುರಾಡೆ ಇವರು ಸಾಕಷ್ಟು ಹಣದ ಸಹಾಯ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಮದುವೆಗಿಂತ ಮುಂಚೆ ನನ್ನ ಪತಿಯ ಪರಿಚಯ ನನಗೆ ಇರಲಿಲ್ಲ. ಆದ್ದರಿಂದ ಮದುವೆಗಿಂತ ಮುಂಚೆ ನಡೆದಿರುವ ಸದರಿ ಮನೆತನದ ವಿಷಯ ಸಂಗತಿಗಳು ನನಗೆ ಗೊತ್ತಿಲ್ಲ ಎಂದರೆ ನಿಜ.

ಸಾಕ್ಷಿದಾರರಿಗೆ ಒಂದು ಪಾಸಪುಸ್ತಕ ತೋರಿಸಲಾಗಿ ಸದರಿ ಪಾಸಪುಸ್ತಕನಲ್ಲಿ ನನ್ನ ಗಂಡನ ಖಾತೆಗೆ ರಾಮಚಂದ್ರ ಕುರಾಡೆ ಇರುವ ಹಣ ಕಳಿಸಿರುವ ಬಗ್ಗೆ ಉಲ್ಲೇಖವಿರುತ್ತದೆ ಎಂದರೆ ಸಾಕ್ಷಿದಾರರು ಸದರಿಯವರು ನನ್ನ ಪತಿಯ ಹತ್ತಿರ 2 ಲಕ್ಷ ರೂಪಾಯಿಗಳ ಸಾಲ ಪಡೆದಿರುತ್ತಾರೆ, ಅದನ್ನು ಮರಳಿ ನೀಡಿರುವ ಉಲ್ಲೇಖವಿರುತ್ತದೆ ಎಂದು ಹೇಳುತ್ತಾರೆ. ಈ ವಿಷಯ ಸಂಗತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಮಕ್ಕಳು ಇಲ್ಲ ಎಂದರೆ ನಿಜ. ಮಕ್ಕಳು ಆಗುವ ಸಲುವಾಗಿ ಸಾಕಷ್ಟು ಕಡೆ ಆಸ್ಪತ್ರೆಗಳಲ್ಲಿ ತೋರಿಸಿಕೊಂಡಿರುತ್ತೇನೆ ಎಂದರೆ ನಿಜ. ಅದಕ್ಕೆ ಸಾಕಷ್ಟು ಖರ್ಚಾಗಿರುತ್ತದೆ ಎಂದರೆ ನಿಜ. ನನ್ನ ಪತಿ ಮದ್ಯಪಾನ ಸೇವನೆ ಮಾಡುತ್ತಿದ್ದರು ಎಂದರೆ ಸಾಕ್ಷಿದಾರರು ಯಾವಾಗಲಾದರೂ ಒಮ್ಮೆ ಸೇವಿಸುತ್ತಿದ್ದರು ಎಂದು ಉತ್ತರಿಸುತ್ತಾರೆ. ನಾನು ಧಾರವಾಡದಲ್ಲಿ ಹೆಚ್ಚಿಗೆ ವಾಸವಿರುತ್ತಿರಲಿಲ್ಲ ಆದ್ದರಿಂದ ನನ್ನ ಪತಿ

ಕುಡಿತದ ಚಟಕ್ಕೆ ಬಲಿಯಾಗಿದ್ದರು ಎಂದರೆ ಸರಿಯಲ್ಲ. ನನ್ನ ಪತಿಗೆ ಅನುಕಂಪದ ಆಧಾರದ ಮೇರೆಗೆ ನೌಕರಿ ಬಂದಿರುತ್ತದೆ ಎಂದರೆ ನಿಜ. ನನಗೆ 35 ಸಾವಿರ ರೂಪಾಯಿಗಳ ಪಿಂಚಣಿ ಬರುತ್ತದೆ.

***ಪಾಟೀ ಸವಾಲು : 6 ನೇ ಪ್ರತಿವಾದಿ ಪರ ವಕೀಲರಿಂದ.***

ನನ್ನ ಪತಿ 5 ವಿಮೆ ಪಾಲಿಸಿಗಳನ್ನು ಮಾಡಿಸಿದ್ದರು ಎಂದರೆ ನಿಜ. ಅವುಗಳಲ್ಲಿ ನಾಲ್ಕು ಹುಬ್ಬಳ್ಳಿಯಲ್ಲಿ ಮತ್ತು ಒಂದು ಧಾರವಾಡದಲ್ಲಿ ಪಡೆದುಕೊಂಡಿರುತ್ತೇನೆ. ಈ ಐದು ಪಾಲಿಸಿಗಳಲ್ಲಿ ನಾನೇ ನಾಮಿನಿ ಇರುತ್ತೇನೆ ಎಂದರೆ ನಿಜ. ಈ ಪೈಕಿ ನಾಲ್ಕು ಪಾಲಿಸಿಗಳ ಮೊತ್ತ ರೂ.6,87,500/-ಗಳು ದಿ:18-07-2018 ರಂದು ನನಗೆ ಬಂದಿರುತ್ತದೆ ಎಂದರೆ ನಿಜ.

***ಮರು ವಿಚಾರಣೆ : ಇಲ್ಲ.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,
ಧಾರವಾಡ.